ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಬಿ.ವಿ. ನಾಗರತ್ನ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬೆಳ್ಳುಂಕೆ ಎ.ಎಸ್.

ಭಾರತ ಒಕ್ಕೂಟ ಮತ್ತು ಇತರರು ವಿರುದ್ಧ ಆರ್.ಕೆ. ಕುಲಕರ್ಣಿ

ರಿಟ್ ಅರ್ಜಿಸಂಖ್ಯೆ: 102322/2018 (ಎಸ್- ಸಿಎಟಿ), ದಿನಾಂಕ 27 ನೇ ನವೆಂಬರ್, 2018

ಆಜ್ಞೆ

ನ್ಯಾಯಮೂರ್ತಿ ಶ್ರೀಮತಿ ಬಿ.ವಿ. ನಾಗರತ್ನ:

ಈ ರಿಟ್ ಅರ್ಜಿಯನ್ನು ಆದೇಶಕ್ಕಾಗಿ ಪಟ್ಟಿ ಮಾಡಲಾಗಿದೆ.ಆದಾಗ್ಯೂ, ಭಾರತ ಒಕ್ಕೂಟ ಮತ್ತು ಅಂಚೆ ಇಲಾಖೆ ಪರ ಮಾನ್ಯ ನ್ಯಾಯವಾದಿಗಳ ಹಾಗೂ ಪ್ರತ್ಯರ್ಜಿದಾರರ ಪರ ನ್ಯಾಯವಾದಿಗಳ ಸಮ್ಮತಿಯಿಂದ ಅಂತಿಮವಾಗಿ ಇದನ್ನು ಸುನಾವಣೆ ಮಾಡಲಾಗಿದೆ.

2. ಅರ್ಜಿದಾರರಾದ, ಭಾರತ ಒಕ್ಕೂಟ ಮತ್ತು ಅಂಚೆ ಇಲಾಖೆ ಇವರು ಒ.ಎ.ಸಂಖ್ಯೆ:170/00898/2016 ರಲ್ಲಿ ಹೊರಡಿಸಿದದಿನಾಂಕ: 22.11.2017 ರ ಆದೇಶವನ್ನು ಪ್ರಶ್ನಿಸಿದ್ದಾರೆ.ಅದರ ಪ್ರತಿ ಅನುಬಂಧ ' ಎ'ಯಲ್ಲಿದೆ.ಸದರಿ ಆದೇಶದ ಮೂಲಕ, ಆಡಳಿತ ನ್ಯಾಯಾಧಿಕರಣವು (ಇದರಲ್ಲಿ ಇನ್ನು ಮುಂದೆ ಅನುಕೂಲಕ್ಕಾಗಿ ' ನ್ಯಾಯಾಧಿಕರಣ ' ಎಂದು ಉಲ್ಲೇಖಿಸಲಾಗಿದೆ).ಪರಿಮಿತ ಇಲಾಖಾ ಸ್ಪರ್ಧಾತ್ಮಕ ಪರೀಕ್ಷೆ ಆಧಾರದ ಮೇಲೆ ಅಂಚೆ ಸಹಾಯಕ ಹುದ್ದೆಗೆ ಅರ್ಜಿದಾರನ ಎ ನೇಮಕಾತಿಯನ್ನು ಮುಂಬಡ್ತಿ ಎಂದು ಪರಿಗಣಿಸಲಾಗದು, ಆದರೆ ನೇರ ನೇಮಕಾತಿಯ ಪಕರಣವೆಂದು ಪರಿಗಣಿಸಬಹುದು ಎಂದು ನಿರ್ಣಯಿಸಿ ಮೂಲ ಅರ್ಜಿಗೆ ಅನುಮತಿ ನೀಡಿದೆ.ಅರ್ಜಿದಾರಳು ಎರಡು ಆರ್ಥಿಕ ಮುಂಬಡ್ತಿಗಳನ್ನು ಎಂದರೆ ಮೊದಲನೆಯದಾಗಿ ಹದಿನಾರು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ್ದರ ಆಧಾರದ ಮೇಲೆ ಸಮಯ ಬದ್ಧ ಒಂದು ಮುಂಬಡ್ತಿ (ಟಿಬಿಒಪಿ) ಯನ್ನು ಮತ್ತು ಎರಡನೆಯದಾಗಿ ಅಂಚೆ ಸಹಾಯಕ ವೃಂದದಲ್ಲಿ ಇಪ್ಪತ್ತಾರು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ್ದರಿಂದ ದ್ವೈವಾರ್ಷಿಕ ವೃಂದ ಪರಿಷ್ಕರಣೆ ಯೋಜನೆ (ಬಿ.ಸಿ.ಆರ್.ಎಸ್.) ಅಡಿಯಲ್ಲಿ ಇನ್ನೊಂದು ಮುಂಬಡ್ತಿಯನ್ನು ಪಡೆದಿದ್ದರಿಂದ 3ನೇ ಪರಿವರ್ತಿತ ನಿಶ್ಚಿತ ವೃತ್ತಿ ಪ್ರಗತಿ ಯೋಜನೆ (ಇದರಲ್ಲಿ ಇನ್ನು ಮುಂದೆ ಅನುಕೂಲಕ್ಕಾಗಿ ' ಎಂಎಸಿಪಿ-III ' ಎಂದು ಉಲ್ಲೇಖಿಸಲಾಗಿದೆ) ಹಕ್ಕುಳ್ಳವಳನ್ನಾಗಿ ಮಾಡಲಾಗುತ್ತದೆ, ಪರಿಯೋಜನೆಗಳನ್ನು ಆಕೆಯುದಿನಾಂಕ: 01.09.2008 ರಿಂದ ಅಥವಾ ನಂತರದ ದಿನಾಂಕದಿಂದ ಜಾರಿಗೆ ಬರುವಂತೆ ಅಂಚೆ ಸಹಾಯಕಳಾಗಿ ಮೂವತ್ತು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ಆಧಾರದ ಮೇಲೆ ಪಡೆಯಲು ಹಕ್ಕುಳ್ಳವಳಾಗಿದ್ದಾಳೆ.ತದನುಸಾರವಾಗಿ, ಇದರಲ್ಲಿನ ಅರ್ಜಿದಾರರಿಗೆ ಅಂಚೆ ಸಹಾಯಕರಾಗಿ ಮೂವತ್ತು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ಆಧಾರದ ಮೇಲೆ ಅಥವಾದಿನಾಂಕ: 01.09.2008 ರಿಂದ ಜಾರಿಗೆ ಬರುವಂತೆ ಅಥವಾ ಸದರಿ ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳುಗಳ ಅವಧಿಯೊಳಗೆ ಅನ್ವಯವಾಗುವ ದಿನಾಂಕದಿಂದ ಎಂ.ಎ.ಸಿ.ಪಿ.-III ಯೋಜನೆ ಅಡಿಯಲ್ಲಿ 3 ನೇ ಆರ್ಥಿಕ ಮುಂಬಡ್ತಿಯನ್ನು ಅರ್ಜಿದಾರರಿಗೆ ಮಂಜೂರು ಮಾಡಿ ಅಗತ್ಯ ಆದೇಶಗಳನ್ನು ನೀಡಲು ಇದರಲ್ಲಿನ ಅರ್ಜಿದಾರರಿಗೆ ನಿರ್ದೇಶನವನ್ನು ನೀಡಲಾಯಿತು.ಅಲ್ಲದೆ, ಸದರಿ ಅವಧಿಯೊಳಗೆ ಎಲ್ಲಾ ತತ್ಪರಿಣಾಮದ ಪ್ರಯೋಜನಗಳನ್ನು ಬಿಡುಗಡೆ ಮಾಡುವಂತೆ ಇದರಲ್ಲಿನ ಅರ್ಜಿದಾರರಿಗೆ ನಿರ್ದೇಶನವನ್ನು ನೀಡಲಾಯಿತು.

3. ಇದರಲ್ಲಿನ ಪ್ರತ್ಯರ್ಜಿದಾರರನ್ನು ಇಲಾಖಾ ಸಿಬ್ಬಂದಿ ಮಾರಾಟಗಾರ (ಡಿಎಸ್)/ಪೋಸ್ಟ್ ಮ್ಯಾನ್ (ಪೋಸ್ಟ್ ವುಮನ್) ಆಗಿದಿನಾಂಕ: 25.10.1973 ರಿಂದ ಜಾರಿಗೆ ಬರುವಂತೆ ಆಯ್ಕೆ ಆಧಾರದ ಮೇಲೆ ನೇಮಕ

ಮಾಡಲಾಯಿತು.ಆ ತರುವಾಯ; ಆಕೆಯು ಪರಿಮಿತ ಇಲಾಖಾ ಸ್ಪರ್ಧಾತ್ಮಕ ಪರೀಕ್ಷೆಗೆ (ಇದರಲ್ಲಿ ಇನ್ನು ಮುಂದೆ ಅನುಕೂಲಕ್ಕಾಗಿ ' ಇಲಾಖಾ ಪರೀಕ್ಷೆ ' ಎಂದು ಉಲ್ಲೇಖಿಸಲಾಗಿದೆ) ಹಾಜರಾಗಿ, ಆಕೆಯನ್ನುದಿನಾಂಕ: 25.03.1978 ರಂದು ಅಂಚೆ ಸಹಾಯಕರಾಗಿ ನೇಮಕ ಮಾಡಲಾಯಿತು.ದಿನಾಂಕ: 27.03.1994 ರಿಂದ ಜಾರಿಗೆ ಬರುವಂತೆ ಆಕೆಯ ಸೇವೆಯ 16 ವರ್ಷಗಳು ಪೂರ್ಣಗೊಂಡ ನಿಮಿತ್ತ, ಇಲಾಖೆಯು ಆರ್ಥಿಕ ಮುಂಬಡ್ತಿಯನ್ನು ನೀಡಿತು ಹಾಗೂ ತರುವಾಯ, 26 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ನಿಮಿತ್ತ ಬಿ.ಸಿ.ಆರ್.ಎಸ್. ಅಡಿಯಲ್ಲಿ ಆಕೆಗೆ ತತ್ಸಂಬಂಧಿ ಪ್ರಯೋಜನಗಳನ್ನು ನೀಡಿತು.ತರುವಾಯದಲ್ಲಿ, ಭಾರತ ಸರ್ಕಾರವು ಮಾರ್ಪಡಿಸಿದ ನಿಶ್ಚಿತ ವೃತ್ತಿ ಪ್ರಗತಿ ಯೋಜನೆ (ಎಂ.$$_0_$$ಸಿ.ಪಿ) ಯನ್ನು ಕೇಂದ್ರ ಸರ್ಕಾರಿ ನೌಕರರಿಗೆದಿನಾಂಕ: 01.09.2008 ರಿಂದ ಜಾರಿಗೆ ಬರುವಂತೆ ಪರಿಚಯಿಸಿತು.ಸದರಿ ಯೋಜನೆಯ ಪ್ರಕಾರ, 10/20/30 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ನಂತರ ಪ್ರತಿಯೊಬ್ಬ ಅರ್ಜಿದಾರ ಇಲಾಖೆಯುದಿನಾಂಕ: 01.09.2008 ರಿಂದ ಜಾರಿಗೆ ಬರುವಂತೆ ಟಿಬಿಒಪಿ/ಬಿಸಿಆರ್ ಯೋಜನೆಗಳಿಗೆ ಬದಲಾಗಿ ಇದನ್ನು ಅಳವಡಿಸಿಕೊಂಡಿತು.

4. ವಿಷಯ ಹೀಗಿರುವಾಗ, ಅಂಚೆ ಸಹಾಯಕ ವೃಂದದಲ್ಲಿ 30 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರುವರೆಂಬ ಆಧಾರದ ಮೇಲೆ ಎಂ.ಎ.ಸಿ.ಪಿ.-III ನ್ನು ಮಂಜೂರು ಮಾಡುವುದನ್ನು ಅಲ್ಲಗಳೆಯುವುದು ತನಗೆ ಆರ್ಥಿಕ ನಷ್ಟವನ್ನುಂಟು ಮಾಡುತ್ತದೆಂದು ಮತ್ತು ಅನ್ಯಾಯವೆಂದು ವಾದಿಸುವ ಮೂಲಕ ಪ್ರತ್ಯರ್ಜಿದಾರಳು ಅದನ್ನು ಮಂಜೂರು ಮಾಡಲುದಿನಾಂಕ: 09.01.2016 ರಂದು ಒಂದು ಮನವಿಯನ್ನು ಸಲ್ಲಿಸಿದ್ದಾಳೆ.ಜೋಧಪುರ ಹಾಗೂ ಇತರೆ ನ್ಯಾಯಾಧಿಕರಣಗಳು ಇಂತಹ ಪರಿಹಾರಗಳನ್ನು ನೀಡಿವೆ ಎಂದು ವಾದಿಸಲಾಯಿತು.ಇದನ್ನು ಪ್ರತ್ಯರ್ಜಿದಾರಳಿಗೆ ನೀಡದ ಕಾರಣ ಆಕೆಯು ಎಂ.ಎ.ಸಿ.ಪಿ.-III ಇದರ ಲಾಭಗಳನ್ನು ತನಗೂ ಕೂಡಾ ನೀಡುವಂತೆ ಕೋರಿ ನ್ಯಾಯಾಧಿಕರಣವನ್ನು ಸಂಪರ್ಕಿಸಿದ್ದಾಳೆ.ಇದರಲ್ಲಿನ ಅರ್ಜಿದಾರರು ಇದನ್ನು ವಿರೋಧಿಸಿದ್ದಾರೆ.ಪ್ರತ್ಯರ್ಜಿದಾರಳು ಇಲಾಖಾ ಪರೀಕ್ಷೆಗೆ ಹಾಜರಾಗಿದ್ದು, ಆಕೆಗೆ ಅಂಚೆ ಸಹಾಯಕ ಹುದ್ದೆಗೆ ಬಡ್ತಿ ನೀಡಲಾಯಿತು ಮತ್ತು ಆ ನಂತರ ಆಕೆಗೆ ಟಿಬಿಒಪಿ ಹಾಗೂ ಬಿಸಿಆರ್ಎಸ್ ಯೋಜನೆಗಳ ಅಡಿಯಲ್ಲಿನ ಪ್ರಯೋಜನಗಳನ್ನು ಒದಗಿಸಲಾಯಿತು ಹಾಗೂ ಎಂ.ಎ.ಸಿ.ಪಿ. ಅಡಿಯಲ್ಲಿ ಹೆಚ್ಚಿನ ಪ್ರಯೋಜನಗಳ ನೀಡಿಕೆಯು, ಇಲ್ಲಿ ಉದ್ಭವಿಸುವುದಿಲ್ಲವೆಂದು ವಾದಿಸಲಾಯಿತು.ಆದಾಗ್ಯೂ, ಪ್ರಶ್ನಿತ ಆದೇಶದ ಮೂಲಕ ನ್ಯಾಯಾಧಿಕರಣವು ಮೇಲೆ ಹೇಳಿದ ನಿರ್ದೇಶನವನ್ನು ನೀಡಿವೆ.ಇದರಿಂದ ಬಾಧಿತರಾಗಿ ಭಾರತ ಒಕ್ಕೂಟ ಮತ್ತು ಅಂಚೆ ಇಲಾಖೆಯು ಈ ನ್ಯಾಯಾಲಯದ ಮುಂದೆ ಇದನ್ನು ಪ್ರಶ್ನಿಸಿದ್ದಾರೆ.

5. ನಾವು ಅರ್ಜಿದಾರರ ಪರ ನ್ಯಾಯವಾದಿ ಹಾಗೂ ಪ್ರತ್ಯರ್ಜಿದಾರ ಪರ ನ್ಯಾಯವಾದಿಗಳ ವಾದವನ್ನು ಆಲಿಸಿ, ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯಗಳನ್ನು ಪರಿಶೀಲಿಸಿದ್ದೇವೆ.

6. ತಮ್ಮ ನಿವೇದನೆಯನ್ನು ಸಲ್ಲಿಸುವಾಗ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಭಾರತೀಯ ಅಂಚೆ ಮತ್ತು ಟೆಲಿಗ್ರಾಫ್ (ಕಾಲ ವೇತನ ಶ್ರೇಣಿ ಗುಮಾಸ್ತರು ಮತ್ತು ವಿಂಗಡನೆಕಾರರ) ನೇಮಕಾತಿ ನಿಯಮಗಳು, 1971 ರ ಕಡೆಗೆ ನಮ್ಮ ಗಮನ ಸೆಳೆದು, ಸದರಿ ನಿಯಮಗಳಡಿಯಲ್ಲಿ, ಎರಡು ವಿಧಾನದಲ್ಲಿ ಅಂಚೆ ಸಹಾಯಕ ಹುದ್ದೆಯನ್ನು ಭರ್ತಿ ಮಾಡಲಾಗುವುದು:( ಎ) ಶೇಕಡ 50 ರಷ್ಟು ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವುದು ಮತ್ತು (ಬಿ) ಶೇಕಡ 50 ರಷ್ಟು ಹುದ್ದೆಗಳನ್ನು ಪರೀಕ್ಷೆಯ ಮೂಲಕ ಮುಂಬಡ್ತಿಯಿಂದ ಭರ್ತಿಮಾಡುವುದು.ಪ್ರಸ್ತುತ ಮೊಕದ್ದಮೆಯಲ್ಲಿ, ಪ್ರತ್ಯರ್ಜಿದಾರರು ಇಲಾಖಾ ಪರೀಕ್ಷೆಗೆ ಹಾಜರಾಗಿ ಅದರಲ್ಲಿ ಉತ್ತೀರ್ಣರಾಗಿ ಅಂಚೆಯ ಸಹಾಯಕರಾಗಿ ಮುಂಬಡ್ತಿ ಪಡೆದಿದ್ದಾರೆ.ಆದ್ದರಿಂದ ಅಂಚೆ ಸಹಾಯಕರಾಗಿ ಆಕೆಯ ನೇಮಕಾತಿಯನ್ನು ಮುಂಬಡ್ತಿಯ ವಿಧಾನದ ಮೂಲಕ ನೇರ ನೇಮಕಾತಿ ಎಂದು ಅರ್ಥೈಸಲಾಗುವುದಿಲ್ಲ.ಅಂಚೆ ಸಹಾಯಕ ಹುದ್ದೆಯನ್ನು ಶೇಕಡಾ 50 ರಷ್ಟರವರೆಗೆ ಅಂಚೆ ಇಲಾಖೆಯ ಸೇವೆಯಲ್ಲಿ ಇರದೆ ಇರುವ ವ್ಯಕ್ತಿಗಳ ಸಂಬಂಧವಾಗಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗುತ್ತದೆ.ಆದರೆ ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಉದ್ಯೋಗಿಗಳಿಗೆ ಸಂಬಂಧಿಸಿದಷ್ಟರ ಮಟ್ಟಿಗೆ ಸದರಿ ಖಾಲಿ ಹುದ್ದೆಗಳನ್ನು ಶೇಕಡ 50 ರಷ್ಟು ಖಾಲಿ ಹುದ್ದೆಗಳಿಗೆ ಸಂಬಂಧಿಸಿದಷ್ಟರ ಮಟ್ಟಿಗೆ ಇಲಾಖಾ ಪರೀಕ್ಷೆಯ ಮೂಲಕ ಮುಂಬಡ್ತಿ ನೀಡಿ ಭರ್ತಿ ಮಾಡಲಾಗುತ್ತದೆ.ಪ್ರತ್ಯರ್ಜಿದಾರರು ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿದ್ದರಿಂದ, ಆಕೆಗೆ ಸದರಿ ಹುದ್ದೆಗೆ ಮುಂಬಡ್ತಿ ನೀಡಲಾಯಿತು.ಈ ಸಂದರ್ಭಗಳಲ್ಲಿ, ಇದನ್ನು ಕುರಿತು ನೇರ ನೇಮಕಾತಿ ಎಂದು ಅರ್ಥೈಸುವಲ್ಲಿ ಮತ್ತು ಆ ಮೂಲಕ ಎಂ.ಎ.ಸಿ.ಪಿ.-III ರ ಅಡಿಯಲ್ಲಿ

ಪ್ರತ್ಯರ್ಜಿದಾರರ ಮೊಕದ್ದಮೆಯ ಪರಿಗಣನೆಯ ಉದ್ದೇಶಕ್ಕಾಗಿ ಇದನ್ನು ಹೊರತುಪಡಿಸುವ ಮೂಲಕ ತಪ್ಪೆಸಗಿದೆ.ಅಂಚೆ ಸಹಾಯಕಳಾಗಿ ಪ್ರತ್ಯರ್ಜಿದಾರಳ ನೇಮಕಾತಿಯನ್ನು ಮುಂಬಡ್ತಿ ನೀಡುವ ಮೂಲಕ ಮಾಡಿದ್ದರೆ, ಮತ್ತು ಇದು ನೇರ ನೇಮಕಾತಿ ಅಲ್ಲವಾಗಿದ್ದರೆ, ಆಗ ಪ್ರತ್ಯರ್ಜಿದಾರಳು ಎಂ.ಎ.ಸಿ.ಪಿ.-III ರ ಅಡಿಯಲ್ಲಿನ ಪ್ರಯೋಜನಗಳಿಗೆ ಅರ್ಹಳಿರುವಳೆ ಎಂದು ಖಚಿತಪಡಿಸುವಾಗ ಇದು ಪರಿಗಣನೆಗೆ ತೆಗೆದುಕೊಳ್ಳಬೇಕಾದ ಒಂದು ನಿರ್ಣಾಯಕ ಸಂಗತಿಯಾಗಿದೆ ಎಂದು ವಾದಿಸಲಾಯಿತು.ಪ್ರತ್ಯರ್ಜಿದಾರರು ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಅಂಚೆ ಸಹಾಯಕ ಹುದ್ದೆಗೆ ಮುಂಬಡ್ತಿ ಹೊಂದಿರುವುದರಿಂದ ಮತ್ತು ಟಿ.ಬಿ.ಒ.ಪಿ ಯೋಜನೆ ಹಾಗೂ ಬಿ.ಸಿ.ಆರ್.ಎಸ್. ಯೋಜನೆಗಳ ಅಡಿಯಲ್ಲಿ ಪ್ರಯೋಜನಗಳನ್ನು ನೀಡಿರುವುದರಿಂದ, ಆಕೆಗೆ ಎಂ.ಎ.ಸಿ.ಪಿ.-III ರ ಅಡಿಯಲ್ಲಿ ಪುನಃ ಪ್ರಯೋಜನಗಳನ್ನು ನೀಡಲಾಗುವುದಿಲ್ಲ.ಈ ಸಂಬಂಧವಾಗಿ ವಿಂಗಡಿಸುವ ಸಹಾಯಕ (ಸಾರ್ಟಿಂಗ್ ಅಸಿಸ್ಟೆಂಟ್) ಅಥವಾ ಅಂಚೆ ಸಹಾಯಕ (ಪೋಸ್ಟಲ್ ಅಸಿಸ್ಟಂಟ್) ಹುದ್ದೆಗೆ ನೇಮಕಾತಿಯು ಇಲಾಖಾ ಮುಂಬಡ್ತಿಯ ಪ್ರಕರಣವಾಗಿದೆ ಎಂದು ನಿರ್ಣಯಿಸಲಾಗಿರುವ ಮತ್ತುದಿನಾಂಕ: 02.08.2018 ರಂದು ವಿಲೆ ಮಾಡಲಾದ ಭಾರತ ಒಕ್ಕೂಟ ಮತ್ತು ಇತರರು ವಿರುದ್ಧ ಎಂ.ಜಿ. ಶಿವಅಂಗಪ್ಪ (ಶಿವಅಂಗಪ್ಪ)- ರಿಟ್ ಅರ್ಜಿಸಂಖ್ಯೆ: 57935/2017, ಮೊಕದ್ದಮೆಯಲ್ಲಿ ಹೊರಡಿಸಿದ ಈ ನ್ಯಾಯಾಲಯದ ಸಮನ್ವಯ ಪೀಠದ ಇತ್ತೀಚಿನ ಆದೇಶವನ್ನು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಅವಲಂಬಿಸಿದ್ದಾರೆ.ಆದ್ದರಿಂದ ಸದರಿ ಆಜ್ಞೆಯನ್ನು ಪ್ರಸ್ತುತ ಮೊಕದ್ದಮೆಗೆ ಅನ್ವಯಿಸಬಹುದಾಗಿದೆ ಮತ್ತು ರಿಟ್ ಅರ್ಜಿಗೆ ಅನುಮತಿ ನೀಡಬಹುದಾಗಿದೆ.

7. ಇದಕ್ಕೆ ಪ್ರತಿಯಾಗಿ, ಮೊದಲಲ್ಲಿ, ಅರ್ಜಿದಾರರ ಪರ ನ್ಯಾಯವಾದಿಗಳು ಉಲ್ಲೇಖಿಸಿದ ಈ ನ್ಯಾಯಾಲಯದ ಬೆಂಗಳೂರು ಪೀಠದಿಂದ ಹೊರಡಿಸಲಾದ ಆದೇಶವನ್ನು ಅದರಲ್ಲಿನ ಪ್ರತ್ಯರ್ಜಿದಾರರ ಸುನಾವಣೆಯಿಲ್ಲದೆ ಹೊರಡಿಸಲಾಗಿರುವ ಆದೇಶವಾಗಿದೆ ಎಂದು ಮತ್ತು ಆದುದರಿಂದ ಪ್ರಸ್ತುತ ಮೊಕದ್ದಮೆಗೆ ಅನ್ವಯವಾಗಬೇಕೆಂದು ಅರ್ಥೈಸಲಾಗದು ಎಂದು ಪ್ರತ್ಯರ್ಜಿದಾರರ ಪರ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.ಅವರು, ಪರಿಮಿತ ಇಲಾಖಾ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಂಚೆ ಸಹಾಯಕ ಅಥವಾ ವಿಂಗಡಣೆ (ಸಾರ್ಟಿಂಕ್) ಸಹಾಯಕ ಹುದ್ದೆಗಳನ್ನು ಭರ್ತಿ ಮಾಡುವುದು ನೇರ ನೇಮಕಾತಿಯಲ್ಲೇ ಹೊರತು ಮುಂಬಡ್ತಿ ರೀತಿಯಲ್ಲಿ ಅಲ್ಲವೆಂದು; ಮತ್ತು ಸಂಬಂಧಿಸಿದ ವಿಷಯಗಳಲ್ಲಿ ವಿಭಾಗೀಯ ಪೀಠವು ರೂಪಿಸಿದ ಭಾರತ ಒಕ್ಕೂಟ ಮತ್ತು ಇತರರು -ವಿರುದ್ಧ ಬನ್ವರ್ಲಾಲ್ ರೇಗಾರ್ (ಬನ್ವರ್ಲಾಲ್ ರೇಗಾರ್)- ಸಿವಿಲ್ ರಿಟ್ ಅರ್ಜಿಸಂಖ್ಯೆ: 11336/2012- ದಿನಾಂಕ 4-2-2015, ಮೊಕದ್ದಮೆಯಲ್ಲಿ ರಾಜಸ್ಥಾನ ಉಚ್ಚ ನ್ಯಾಯಾಲಯದ ಜೋಧಪುರ ಪೀಠದ ಆದೇಶವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಭಾರತ ಒಕ್ಕೂಟ ಮತ್ತು ಇತರರು ಪ್ರಶ್ನಿಸಿದ್ದರೆಂದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎಸ್‌ಎಲ್ಪಿ (ಸಿವಿಲ್) ಡೈರಿಸಂಖ್ಯೆ: 23260/2018 ರಲ್ಲಿದಿನಾಂಕ: 10.08.2018 ರ ಅದರ ಆದೇಶದ ಮೂಲಕ ಸದರಿ ವಿಶೇಷ ಅನುಮತಿ ಅರ್ಜಿಯನ್ನು ವಜಾಗೊಳಿಸಿತೆಂದು ಮತ್ತು ಹಾಗಾಗಿ, ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ಅನುಮೋದನೆ ಪಡೆದ ರಾಜಸ್ಥಾನ ಉಚ್ಚ ನ್ಯಾಯಾಲಯದ ಆದೇಶವನ್ನು ಪ್ರಸ್ತುತ ಮೊಕದ್ದಮೆಯಲ್ಲಿ ಅನುಸರಿಸಬಹುದಾಗಿದೆ ಎಂದು ನಿರ್ಣಯಿಸಲಾಗಿರುವ ರಾಜಸ್ಥಾನ ಉಚ್ಚ ನ್ಯಾಯಾಲಯದ ಜೋಧಪುರ ಚ ಪೀಠವು ಹೊರಡಿಸಿದ ಆದೇಶದ ಕಡೆಗೆ ನಮ್ಮ ಗಮನ ಸೆಳೆದರು.ಮುಂದುವರೆದ ಅವರು, ಅದರಲ್ಲಿ ಎಂ.ಎ.ಸಿ.ಪಿ.-III ರ ಮೇರೆಗಿನ ಪ್ರಯೋಜನಗಳನ್ನು ಚೆನ್ನೈ ನ್ಯಾಯಾಧಿಕರಣದ ಆದೇಶವನ್ನು ಅನುಮೋದಿಸುವ ಮೂಲಕ ವಿಸ್ತರಿಸಲಾಗಿದ್ದಂಥ ಭಾರತ ಒಕ್ಕೂಟ ಮತ್ತು ಇತರರು ವಿರುದ್ಧ ಡಿ. ಶಿವಕುಮಾರ್ ಮತ್ತು ಮತ್ತೊಬ್ಬರು (ಡಿ. ಶಿವಕುಮಾರ್) ಮೊಕದ್ದಮೆಯಲ್ಲಿ ಮದ್ರಾಸ್ ಉಚ್ಚ ನ್ಯಾಯಾಲಯದ ನ್ಯಾಯ ನಿರ್ವಹಣೆ ವಿಭಾಗೀಯ ಪೀಠವು ಹೊರಡಿಸಿದದಿನಾಂಕ: 04.02.2015 ರ ಆದೇಶದ ಕಡೆಗೆ ನಮ್ಮ ಗಮನ ಸೆಳೆದಿದ್ದಾರೆ.ಸದರಿ ಆದೇಶದ ವಿರುದ್ಧ ಸಲ್ಲಿಸಲಾದ ವಿಶೇಷ ಅನುಮತಿ ಅರ್ಜಿಯನ್ನು, ಕಾನೂನಿನ ಪ್ರಶ್ನೆಯನ್ನು ಮುಕ್ತವಾಗಿರಿಸಿದಿನಾಂಕ: 16.08.2018 ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಜಾಗೊಳಿಸಿದೆ.ಚ

8. ಇದಲ್ಲದೆ ಅವರು, ಸದರಿ ಆಜ್ಞೆಯ ವಿರುದ್ಧ ಒಂದು ಪುನರವಲೋಕನ ಅರ್ಜಿಯನ್ನು ಸಲ್ಲಿಸಲಾಗಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸದರಿ ಚ ಪುನರವಲೋಕನ ಅರ್ಜಿಯನ್ನು ಸಹ ವಜಾಗೊಳಿಸಿದೆ.ಆದುದರಿಂದ, ಪ್ರತಿವಾದಿ ಪರ ಮಾನ್ಯ ನ್ಯಾಯವಾದಿಗಳು, ಈ ರಿಟ್ ಅರ್ಜಿಯಲ್ಲಿ ಗುಣಾರ್ಹತೆ ಇಲ್ಲದಿರುವುದರಿಂದ ಇದನ್ನು ವಜಾಗೊಳಿಸಬಹುದಾಗಿದೆ ಎ ೦ ದು ನಿವೇದಿಸಿಕೊಂಡಿದ್ದಾರೆ.

9. ಸಂಬಂಧಪಟ್ಟ ಪಕ್ಷಕಾರರ ಪರ ನ್ಯಾಯವಾದಿಗಳ ವಾದವನ್ನು ಆಲಿಸಿದ ನಂತರ, ಈ ರಿಟ್ ಅರ್ಜಿಯಲ್ಲಿನ ವಿವಾದ ಬಹಳ ಪರಿಮಿತ ವ್ಯಾಪ್ತಿಯನ್ನು ಹೊ ೦ ದಿದೆ ಎಂದು ನಮಗೆ ಕಂಡು ಬಂದಿದೆ.

10. ಅಂಚೆ ಸಹಾಯಕರಾಗಿ ಪ್ರತ್ಯರ್ಜಿದಾರರ ನೇಮಕವನ್ನು ಮುಂಬಡ್ತಿ ಪ್ರಕರಣ ಎಂದು ಅರ್ಥೈಸಿದರೆ, ಆಗ ಪ್ರತ್ಯರ್ಜಿದಾರರು ಎಂ.ಎ.ಸಿ.ಪಿ.-III ರ ಅಡಿಯಲ್ಲಿನ ಪ್ರಯೋಜನಗಳಿಗೆ ಹಕ್ಕುಳ್ಳವರಾಗುವುದಿಲ್ಲ ಎಂದು ಅರ್ಜಿದಾರರ ಪರ ನ್ಯಾಯವಾದಿಗಳು ವಾದಿಸಿದರೆ, ಪ್ರತ್ಯರ್ಜಿದಾರರ ಪರ ನ್ಯಾಯವಾದಿಗಳು ಸದರಿ ನೇಮಕವು ನೇರ ನೇಮಕಾತಿಯ ಸ್ವರೂಪದ್ದಾಗಿದೆಯೇ ಹೊರತು ಮುಂಬಡ್ತಿಯ ಸ್ವರೂಪದ್ದಲ್ಲ; ಆದುದರಿಂದ ಇದನ್ನು ಎಂ.ಎ.ಸಿ.ಪಿ.-III ರ ಅಡಿಯಲ್ಲಿ ಪ್ರಯೋಜನಗಳ ವಿಸ್ತರಣೆಯ ಉದ್ದೇಶಕ್ಕಾಗಿ ಗಮನಕ್ಕೆ ತೆಗೆದುಕೊಳ್ಳಲಾಗುವುದಿಲ್ಲ ಅಥವಾ ಹಾಗೆ ಪರಿಗಣಿಸಲು ಸಹ ಆಗದು ಎಂದು ವಾದಿಸಿದ್ದಾರೆ.ಈ ಸಂದರ್ಭಗಳ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಪಕ್ಷಕಾರರ ನಡುವಿನ ವಾದದ ಮೂಲ ವ್ಯಾಜ್ಯ ಕಾರಣವನ್ನು ನಿರ್ಣಯಿಸಬೇಕಿದೆ.

11. ಅರ್ಜಿದಾರರ ಇಲಾಖೆಯಲ್ಲಿ ಪ್ರತ್ಯರ್ಜಿದಾರಳನ್ನು ಒಬ್ಬ ಅಂಚೆ ಪೇದೆಯಾಗಿ ನೇಮಕ ಮಾಡಲಾಗಿದ್ದು, ಆ ತರುವಾಯ ಇಲಾಖಾ ಪರೀಕ್ಷೆಗೆ ಹಾಜರಾಗಿ, ಉತ್ತೀರ್ಣಗೊಂಡ ನಂತರ,ದಿನಾಂಕ: 25.3.1975 ರಂದು ಅಂಚೆ ಸಹಾಯಕಳನ್ನಾಗಿ ಆಕೆಯನ್ನು ನೇಮಕ ಮಾಡಲಾಗಿತ್ತು ಎಂಬುದು ವಿವಾದದಲ್ಲಿಲ್ಲ.

12. ಮಾನ್ಯ ಅರ್ಜಿದಾರರ ಪರ ನ್ಯಾಯವಾದಿಗಳು ನಿಯಮಗಳತ್ತ ನಮ್ಮ ಗಮನವನ್ನು ಸೆಳೆದಿದ್ದಾರೆ.ಸದರಿ ನಿಯಮಗಳಡಿಯಲ್ಲಿ ವಿಂಗಡಣೆ ಸಹಾಯಕ/ಅಂಚೆಯ ಸಹಾಯಕ ಹುದ್ದೆಗೆ ಈ ಕೆಳಗಿನ ರೀತಿಯಲ್ಲಿ ನೇಮಕ ಮಾಡಲಾಗಿದೆ ಎಂಬುದನ್ನು ಗಮನಿಸಲಾಗಿದೆ:

(ಎ) ಶೇಕಡ 50 ರಷ್ಟು ನೇರ ನೇಮಕಾತಿ ಮೂಲಕ;

(ಬಿ) ಶೇಕಡ 50 ರಷ್ಟು ಪರೀಕ್ಷೆಯ ಮುಖಾಂತರ ಮುಂಬಡ್ತಿ ನೀಡುವ ಮೂಲಕ;

ನಿಯಮಗಳಿಗೆ ಲಗತ್ತಿಸಿದ ಅನುಸೂಚಿಯಲ್ಲಿ ಇದನ್ನು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.ಇದನ್ನು ಓದಿದ ನಂತರ, ಅಂಚೆ ಸಹಾಯಕ ಅಥವಾ ವಿಂಗಡಣೆ ಸಹಾಯಕ ಅಥವಾ ಯಾವುದೇ ಇತರೆ ಸಮಾನ ಹುದ್ದೆಯನ್ನು ಎರಡು ಮೂಲಗಳಿಂದ ಅಂದರೆ, ಶೇಕಡ 50 ರಷ್ಟು ನೇರ ನೇಮಕಾತಿ ಮೂಲಕ ಹಾಗೂ ಶೇಕಡಾ 50 ರಷ್ಟು ಇಲಾಖೆ ಪರೀಕ್ಷೆಯ ಮೂಲಕ ಮುಂಬಡ್ತಿಯಿಂದ ಭರ್ತಿ ಮಾಡಲಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ.ಹೀಗಾಗಿ, ಸದರಿ ಹುದ್ದೆಗಳನ್ನು ಸಮಾನ ಪ್ರಮಾಣದಲ್ಲಿ ಅಂದರೆ ಪ್ರತಿಯೊಂದಕ್ಕೆ ಶೇಕಡ 50 ರಷ್ಟರಂತೆ ಎರಡು ವಿಧದಲ್ಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ.

13. ಪ್ರತ್ಯರ್ಜಿದಾರರು ಇಲಾಖಾ ಪರೀಕ್ಷೆಗೆ ಹಾಜರಾದಾಗ, ಆಗಲೇ ಆಕೆಯು ಇಲಾಖೆಯಲ್ಲಿ ಅಂಚೆ ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಅಂಚೆ ಇಲಾಖೆಯ ಉದ್ಯೋಗಿಯಾಗಿ ಇಲಾಖಾ ಪರೀಕ್ಷೆಗೆ ಹಾಜರಾಗಲು ಅರ್ಹಳಿದ್ದಳು ಎಂಬುದು ವಿವಾದದಲ್ಲಿಲ್ಲ.ಸದರಿ ಪರೀಕ್ಷೆಯಲ್ಲಿ ಅರ್ಹಳಾದ ನಂತರ, ಅಂಚೆ ಸಹಾಯಕಿಯಾಗಿ ಆಕೆಗೆ ಮುಂಬಡ್ತಿ ನೀಡಲಾಯಿತು.ಆದುದರಿಂದ, ಅಂಚೆ ಸಹಾಯಕಿಯಾಗಿ ಆಕೆಯ ನೇಮಕವು ಸ್ಪಷ್ಟವಾಗಿ ಮುಂಬಡ್ತಿ ಮಾರ್ಗವಾಗಿ ಆದದ್ದೇ ಹೊರತು ನೇರ ನೇಮಕಾತಿಯ ಮಾರ್ಗವಾಗಿ ಅಲ್ಲ. ನೇರ ನೇಮಕಾತಿ ಮೂಲಕ ಖಾಲಿ ಹುದ್ದೆಗಳ ಶೇಕಡ 50 ರಷ್ಟು ನೇಮಕಾತಿಯನ್ನು ಇಲಾಖೆಯಲ್ಲಿಲ್ಲದ, ಅಂದರೆ ಸದರಿ ಹುದ್ದೆಗಳಿಗೆ ಬಾಹ್ಯ ವ್ಯಕ್ತಿಗಳಾಗಿ ಅರ್ಜಿ ಸಲ್ಲಿಸುವಂತವರನ್ನು ಮಾತ್ರ ನೇರ ನೇಮಕಾತಿಯ ಮೂಲಕ ತುಂಬಲಾಗುತ್ತದೆ.ಇಲಾಖೆಯ ನೌಕರರಿಗೆ ಸಂಬಂಧಪಟ್ಟಷ್ಟರ ಮಟ್ಟಿಗೆ ಇಲಾಖಾ ಪರೀಕ್ಷೆಯಲ್ಲಿ ಅರ್ಹರಾಗುವ ಆಧಾರದ ಮೇಲೆ ಮುಂಬಡ್ತಿಯ ಮಾರ್ಗದ ಮೂಲಕ ಮಾತ್ರವೇ ಅವರನ್ನು ಸದರಿ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಬಹುದು.ಈ ಸಂದರ್ಭಗಳ ಹಿನ್ನೆಲೆಯಲ್ಲಿ, ಅಂಚೆ ಸಹಾಯಕಿಯಾಗಿ ಪ್ರತ್ಯರ್ಜಿದಾರಳ ನೇಮಕವು ಮುಂಬಡ್ತಿಯ ಮಾರ್ಗವಾಗಿ ಆದದ್ದೆ ಹೊರತು, ನೇರ ನೇಮಕಾತಿ ಮಾರ್ಗದಲ್ಲಿ ಅಲ್ಲ. ಶಿವಲಿಂಗಪ್ಪ ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಸಮನ್ವಯ ಪೀಠವು ಇತ್ತೀಚಿನದಿನಾಂಕ: 02.02.2018 ರ ತನ್ನ ಆಜ್ಞೆಯಲ್ಲಿ ಇದೇ ರೀತಿ ನಿರ್ಣಯಿಸಿದೆ.ಕಂಡಿಕೆಸಂಖ್ಯೆ: 5 ಮತ್ತು 6 ಇವುಗಳಲ್ಲಿ, ಈ ಕೆಳಗಿನಂತೆ ಅಭಿಪ್ರಾಯಪಡಲಾಗಿದೆ:

“5. ಈ ಸಂಬಂಧವಾಗಿ, ಮೊದಲಿಗೆ, ಒಂದೇ ಹುದ್ದೆಯಲ್ಲಿನ ಮುಂದುವರಿಕೆಯನ್ನು ಸಮರ್ಥಿಸಲಾಗದು ಮತ್ತು ಎಂ.ಎ.ಸಿ.ಪಿ. ಮುಖಾಂತರ ಹಣಕಾಸು ಉನ್ನತೀಕರಣವನ್ನು ಕ್ಲೇಮು ಮಾಡಬಹುದು ಎಂಬುದಕ್ಕೆ ವಿವಿಧ ದರ್ಜೆಗೆ ಸ್ಥಾನವನ್ನು ಮಧ್ಯ ತರುವಂಥ ಮತ್ತು ಮೇಲ್ದರ್ಜೆಗೇರಿಸುವಂಥ ಮುಂಬಡ್ತಿಯನ್ನಾಗಿ ಅದನ್ನು ಪರಿಗಣಿಸಬಹುದೇ ಎಂಬ ನಿರ್ಣಯಕ್ಕೆ ಬರುವ ಸಲುವಾಗಿ ಅಂಚೆ ಸಹಾಯಕರನ್ನಾಗಿ ವಿಂಗಡಣೆ ಸಹಾಯಕರಾಗಿ ಪ್ರತ್ಯರ್ಜಿದಾರಳ ನಿಯೋಜನೆಯು ವಾಸ್ತವ ತಾತ್ಪರ್ಯವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾದ ಅವಶ್ಯಕತೆ ಏನಿದೆ ಎಂಬುದಾಗಿದೆ.ಅಷ್ಟರಮಟ್ಟಿಗೆ ಅನುಬಂಧ ಆರ್ 4 ಇದರಲ್ಲಿರುವಂತೆ ನೇಮಕಾತಿ ನಿಯಮಗಳು ಗುಮಾಸ್ತರು ಮತ್ತು ವಿಂಗಡಣೆಕಾರರ ಸಂಬಂಧದಲ್ಲಿ ಮುಂಬಡ್ತಿಗೆ ಇರುವ ಅವಕಾಶವೆಂದರೆ ನೇರ ನೇಮಕಾತಿ ಮೂಲಕ ಶೇಕಡ 50 ರಷ್ಟು ಮತ್ತು ಇನ್ನುಳಿದ ಸ್ಥಾನಗಳನ್ನು ಪರೀಕ್ಷೆಯ ಮೂಲಕ ಮುಂಬಡ್ತಿಯಿಂದ ಭರ್ತಿ ಮಾಡಲಾಗುತ್ತದೆ.ಆ ಹಿನ್ನೆಲೆಯಲ್ಲಿ,ದಿನಾಂಕ: 21.05.1982 ರ (ಅನುಬಂಧ- ಎ 2) ಆದೇಶದ ಮೂಲಕ ವಿಂಗಡಣೆ ಸಹಾಯಕಳಾಗಿ ಮುಂಬಡ್ತಿ ನೀಡಲಾಗಿರುವ ಪ್ರತ್ಯರ್ಜಿದಾರಳ ಸಂಗತಿಯನ್ನು ಗಮನಕ್ಕೆ ತೆಗೆದುಕೊಂಡರೆ, ವಿಂಗಡಣೆ ಸಹಾಯಕಳಾಗಿ ಹುದ್ದೆ ಪಡೆಯಲು ಇಲಾಖೆಯಲ್ಲಿ ಮುಂಬಡ್ತಿ ಪಡೆದಿದ್ದಾರೆ ಎಂದು ಅದರಲ್ಲಿ ಹೆಸರಿಸಿದ ವ್ಯಕ್ತಿಗಳಲ್ಲಿ ಪ್ರತ್ಯರ್ಜಿದಾರಳ ಹೆಸರು ಕ್ರಮಸಂಖ್ಯೆ: 6 ರಲ್ಲಿ ಕಂಡು ಬರುತ್ತದೆ ಎಂಬುದು ತಿಳಿದುಬರುತ್ತದೆ.ವಿಷಯ ಹೀಗಿದ್ದಲ್ಲಿ, ಅರ್ಜಿದಾರರುದಿನಾಂಕ: 28.11.1979 ರಂದು ನೇಮಕಗೊಂಡಿದ್ದ ಗ್ರೂಪ್-ಡಿ ಯಿಂದ ಬದಲಾಗಿದಿನಾಂಕ: 24.05.1982 ರಂದು ವಿಂಗಡಣೆ ಸಹಾಯಕರ ಹುದ್ದೆಗೆ ನೇಮಕವಾಗಿರುವುದನ್ನು ಮುಂಬಡ್ತಿ ಎಂದು ಪರಿಗಣಿಸಬೇಕಾಗುತ್ತದೆ. ವಿಷಯ ಹೀಗಿದ್ದಾಗ, ಎಂ.ಎ.ಸಿ.ಪಿ. ಯೋಜನೆಯ ಅಡಿಯಲ್ಲಿ ಹಣಕಾಸು ಉನ್ನತೀಕರಣವನ್ನು ಒದಗಿಸುವುದಕ್ಕಾಗಿನ ಸ್ಥಗಿತತೆಯನ್ನು ಸಂಬಂಧಪಟ್ಟ ಉದ್ಯೋಗಿಗೆ ಮುಂಬಡ್ತಿ ನೀಡಿದಾಗ ಅನ್ವಯಿಸಲಾಗದು.ಆ ತರುವಾಯ, ಆ ಸಮಯದಲ್ಲಿ ಚಾಲ್ತಿಯಲ್ಲಿದ್ದಂಥ ಯೋಜನೆಯ ಪ್ರಕಾರ ಪ್ರತ್ಯರ್ಜಿದಾರನು ಬಡ್ತಿಯಾದ ಹುದ್ದೆಯಲ್ಲಿರುವಾಗ, ಸದರಿ ಹುದ್ದೆಯಲ್ಲಿ 16 ವರ್ಷಗಳ ಸೇವೆಯನ್ನು ಸಲ್ಲಿಸಿದ ನಂತರ, ಟಿ.ಬಿ.ಒ.ಪಿ.ಗೆ ಆತನು ಅರ್ಹರಾಗಿದ್ದಾಗದಿನಾಂಕ: 28.05.1998 ರಂದು ಅದನ್ನು ಆತನಿಗೆ ನೀಡಲಾಗಿದೆ.ತರುವಾಯಲ್ಲಿ, ಮುಂದಿನ ಬಿ.ಸಿ.ಆರ್. ಹಣಕಾಸಿನ ಉನ್ನತೀಕರಣವನ್ನುದಿನಾಂಕ: 01.07.2008 ರಂದು ನೀಡಲಾಗಿದೆ.

6. ಈ ವಿಷಯಗಳ ಕುರಿತಾಗಿ ಯಾವುದೇ ಗಂಭೀರವಾದ ವಿವಾದ ಇಲ್ಲದಿರುವಾಗ ಮತ್ತು ಪ್ರತ್ಯರ್ಜಿದಾರನಿಗೆ ಒಂದು ಮುಂಬಡ್ತಿಯನ್ನೂ ಮತ್ತು ಎರಡು ಹಣಕಾಸು ಉನ್ನತೀಕರಣಗಳನ್ನು ನೀಡಲಾಗಿದ್ದು, ಸಿ.ಎ.ಟಿ. ನಿರ್ದೇಶಿಸಿದ ರೀತಿಯಲ್ಲಿ ಎಂ.ಎ.ಸಿ.ಪಿ. ನೀಡುವುದಕ್ಕಾಗಿ ಮತ್ತೆ ಪ್ರತ್ಯರ್ಜಿದಾರನ ಪ್ರಕರಣವನ್ನು ಪರಿಗಣಿಸುವ ಪ್ರಶ್ನೆ ಪ್ರಸ್ತುತ ಮೊಕದ್ದಮೆಯಲ್ಲಿ ಉದ್ಭವಿಸುವುದಿಲ್ಲ.ಈ ಅಭಿಪ್ರಾಯದ ಹಿನ್ನೆಲೆಯಲ್ಲಿ, ಪ್ರತ್ಯರ್ಜಿದಾರನಿಗೆ ಮುಂಬಡ್ತಿ ನೀಡಿದ ದಿನಾ ಂ ಕದಿಂದ ಜಾರಿಗೆ ಬರುವಂತೆ ನೇಮಕಾತಿಯಾಗಿ ಆತನ ಮೊಕದ್ದಮೆಯನ್ನು ಪರಿಗಣಿಸಲು ಮತ್ತು ಎಂ.ಎ.ಸಿ.ಪಿ. ಯೋಜನೆಯ ಪ್ರಯೋಜನವನ್ನು ನೀಡಲು ಅರ್ಜಿದಾರನಿಗೆ ನಿರ್ದೇಶಿಸಿ ಆದೇಶವನ್ನು ನೀಡುವುದು ಸಮರ್ಥನೀಯವಾದುದಲ್ಲ.ತದನುಸಾರವಾಗಿ ಪ್ರಶ್ನಿತ ರಿಟ್ ಅರ್ಜಿಯ ಅನುಬಂಧ-ಕೆ'ಎ'ರಲ್ಲಿನ ದಿನಾಂಕ 21-8-2017ರ ಆದೇಶವನ್ನು ತಳ್ಳಿ ಹಾಕಲಾಗಿದೆ.

ತದನುಸಾರವಾಗಿ ಅರ್ಜಿಯನ್ನು ವಿಲೆ ಮಾಡಲಾಗಿದೆ ”

ಆದುದರಿಂದ, ಸದರಿ ಆದೇಶವನ್ನು ಪಾಲಿಸುವ ಮೂಲಕ ಪ್ರತ್ಯರ್ಜಿದಾರರ ಪರ ನ್ಯಾಯಾಧಿಕರಣವು ಹೊರಡಿಸಿದ ಆದೇಶವನ್ನು ತಳ್ಳಿ ಹಾಕಿ ಈ ಅರ್ಜಿಗಳಿಗೆ ನಾವು ಅನುಮತಿ ನೀಡಬಹುದು; ಆದರೆ, ವಿವಾದ ಇಲ್ಲಿಗೆ ಅಂತ್ಯಗೊಳ್ಳುವುದಿಲ್ಲ.

14. ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಮೇಲೆ ಉಲ್ಲೇಖಿಸಲಾದ ಸರ್ವೋಚ್ಚ ನ್ಯಾಯಾಲಯದ ಎರಡು ಆದೇಶಗಳು ನಮ್ಮ ಗಮನ ಸೆಳೆದಿದ್ದು, ಅದರಲ್ಲಿ ಒಂದು ರಾಜಸ್ಥಾನ ಉಚ್ಚ ನ್ಯಾಯಾಲಯದ ಜೋಧಪುರ ಪೀಠದಿಂದ ಉದ್ಭವಿಸಿದ್ದು ಮತ್ತು ಇನ್ನೊಂದು ಮದ್ರಾಸ್ ಉಚ್ಚ ನ್ಯಾಯಾಲಯದಿಂದ ಉದ್ಭವಿಸಿದ್ದಾಗಿದೆ.ಆ ಆದೇಶಗಳನ್ನು ಉಲ್ಲೇಖಿಸುವುದರೊಂದಿಗೆ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ರಾಜಸ್ಥಾನ ಉಚ್ಚ ನ್ಯಾಯಾಲಯದ ಜೋಧಪುರ ಚ ಪೀಠ ಹಾಗೂ ಮದ್ರಾಸ್ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠಗಳು, ಅಂಚೆ ಸಹಾಯಕ ಅಥವಾ ವಿಂಗಡಣೆ ಸಹಾಯಕರಾಗಿ, ಅಂಚೆ ಇಲಾಖೆಯ ಉದ್ಯೋಗಿಗಳ ಸದರಿ ನೇಮಕವು ನೇರ ನೇಮಕಾತಿ ಎಂದು ನಿರ್ಣಯಿಸಿ ಹೊರಡಿಸಿದ ಆದೇಶಗಳನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅನುಮೋದಿಸಿರುವಾಗ ಈ ನ್ಯಾಯಾಲಯದ

ವಿಭಾಗೀಯ ಪೀಠವು ಇದನ್ನು ಮುಂಬಡ್ತಿಯ ಸ್ವರೂಪದಲ್ಲಿದೆ ಎಂದು ನಿರ್ಣಯಿಸಬಾರದಾಗಿತ್ತು ಎಂದು ವಾದಿಸಿದ್ದಾರೆ.ವಿಶೇಷ ಅನುಮತಿ ಅರ್ಜಿಯನ್ನು ವಜಾಗೊಳಿಸಿರುವುದನ್ನು ಗಮನದಲ್ಲಿರಿಸಿಕೊಂಡು ರಾಜಸ್ಥಾನ್ ಉಚ್ಚ ಚ ನ್ಯಾಯಾಲಯದ ಜೋಧಪುರ ಪೀಠದ ಮತ್ತು ಮದ್ರಾಸ್ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಆದೇಶಗಳಿಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಧಿಕೃತ ಅನುಮತಿ ನೀಡಿದೆ; ಆದುದರಿಂದ, ಇದರಲ್ಲಿನ ರಿಟ್ ಅರ್ಜಿಗಳನ್ನು ವಜಾಗೊಳಿಸಿ, ಸದರಿ ಆದೇಶಗಳನ್ನು ಅನುಸರಿಸಬಹುದಾಗಿದೆ ಮತ್ತು ಪ್ರತ್ಯರ್ಜಿದಾರರಿಗೆ ಪರಿಹಾರವನ್ನು ನೀಡಬಹುದಾಗಿದೆ ಎಂದು ಅವರು ವಾದಿಸಿದ್ದಾರೆ.

15.ದಿನಾಂಕ: 20.09.2016 ರಂದು ವಿಲೆ ಮಾಡಲಾದ ಭಾರತ ಒಕ್ಕೂಟ ಮತ್ತು ಇತರರು –ವಿರುದ್ದ-ಶ್ರೀ ಬಸಣ್ಣ ನಾಯಕ್ (ಬಸಣ್ಣ ನಾಯಕ್)-ರಿಟ್ ಅರ್ಜಿಸಂಖ್ಯೆ: 200807/2016 ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಕಲಬುರ್ಗಿ ಪೀಠದ ಸಮನ್ವಯ ಪೀಠವು ಹೊರಡಿಸಿದ ಆದೇಶವನ್ನು ಸಹ ಮಾನ್ಯ ಪ್ರತ್ಯರ್ಜಿದಾರರ ಪರ ನ್ಯಾಯವಾದಿಗಳು ನಮ್ಮ ಗಮನಕ್ಕೆ ತಂದಿದ್ದಾರೆ.ಸದರಿ ಆದೇಶದಲ್ಲಿಯೂ ಸಹ, ಅಂಚೆ ಸಹಾಯಕರಾಗಿ ಪ್ರತ್ಯರ್ಜಿದಾರರ ನೇಮಕಾತಿಯು ನೇರ ನೇಮಕಾತಿಯಿಂದ ಆದದ್ದೆ ಹೊರತು, ಮುಂಬಡ್ತಿಯಿಂದ ಅಲ್ಲವೆಂದು ನಿರ್ಣಯಿಸಲಾಗಿದೆ ಎಂದು ಅವರು ವಾದಿಸಿದ್ದಾರೆ.ಸದರಿ ಆದೇಶವನ್ನು ಪ್ರಸ್ತುತ ಮೊಕದ್ದಮೆಯಲ್ಲಿ ಅನುಸರಿಸಬಹುದು ಎಂದು ಅವರು ನಿವೇದಿಸಿಕೊಂಡಿದ್ದಾರೆ.

16. ಸದರಿ ನ್ಯಾಯಾಲಯಗಳು ಹೊರಡಿಸಿದ ಆದೇಶಗಳನ್ನು ಪರಿಗಣಿಸುವ ಮೊದಲು, ಕುಂಇಹಮದ್ ಮತ್ತು ಇತರರು -ವಿರುದ್ಧ ಕೇರಳ ರಾಜ್ಯ ಮತ್ತು ಇನ್ನೊಬ್ಬರು, ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸುವುದು ಇಲ್ಲಿ ಉಪಯುಕ್ತವಾಗಿದೆ.ಸದರಿ ತೀರ್ಪಿನಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಭಾರತದ ಸಂವಿಧಾನದ 141 ನೇ ಅನುಚ್ಛೇದದೊಂದಿಗೆ ಓದಲಾದ 136 ನೇ ಅನುಚ್ಛೇದದ ಅಡಿಯಲ್ಲಿನ ಸಂದರ್ಭದಲ್ಲಿ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರ ಕ್ರಮಾದೇಶ-XLVII ರ ನಿಯಮ 1 ರ ಸಂದರ್ಭದಲ್ಲಿ ಸಹ ಸಿದ್ಧಾಂತವನ್ನು ಪರಿಗಣಿಸಿದೆ.ಸದರಿ ತೀರ್ಪಿನ 43 ನೆಯ ಕಂಡಿಕೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಸಂವಿಧಾನದ 136 ನೇ ಅನುಚ್ಛೇದದ ಅಡಿಯಲ್ಲಿ ಚ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದಕ್ಕೆ ಸಂಬಂಧಿಸಿದಂತೆ ಅದರ ನಿರ್ಣಯವನ್ನು ಪುನರ್ ಪರಿಶೀಲಿಸಿದೆ.ಅಪೀಲಿಗೆ ವಿಶೇಷ ಅನುಮತಿಯನ್ನು ನಿರಾಕರಿಸಿ ನೀಡಿದ ಆದೇಶವನ್ನು ಉಲ್ಲೇಖಿಸುವಾಗ, ಬಹುಶಃ ಸಕಾರಣವಲ್ಲದ ಆದೇಶ ಅಥವಾ ಸಕಾರಣವಾದ ಆದೇಶದ ಮೂಲಕ ಎರಡರಲ್ಲಿ ಯಾವ ಮೊಕದ್ದಮೆಗೂ ಸಿದ್ಧಾಂತ ಅನ್ವಯವಾಗುವುದಿಲ್ಲ ಎಂದು ನಿರ್ಣಯಿಸಲಾಗಿದೆ.ಸಲ್ಲಿಸಲಾದ ಅಪೀಲಿಗೆ ಅನುಮತಿ ನೀಡುವ ಸಲುವಾಗಿ, ನ್ಯಾಯಾಲಯದ ವಿವೇಚನಾಧಿಕಾರವನ್ನು ಚಲಾಯಿಸುವುದಕ್ಕೆ ಅದು ಒಲವು ತೋರಿಲ್ಲವೆಂಬುದು ಇದರರ್ಥ.ಅಪೀಲಿಗೆ ಅನುಮತಿ ನೀಡುವುದನ್ನು ತಳ್ಳಿಹಾಕಿ ಆದೇಶ ಹೊರಡಿಸಿರುವುದು ಸಕಾರಣವಾದ ಆದೇಶವಾಗಿದ್ದರೆ, ಅದು ತಳ್ಳಿಹಾಕಿದ್ದಕ್ಕೆ ಕಾರಣಗಳನ್ನು ನೀಡುವ ಒಂದು ಸಕಾರಣ ಆದೇಶವಾಗಿರುತ್ತದೆ.ಆಗ ಆದೇಶವು ಎರಡು ಇಂಗಿತಗಳನ್ನು ಹೊಂದಿರುತ್ತದೆ ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿದೆ:ಮೊದಲನೆಯದಾಗಿ, ಆದೇಶದಲ್ಲಿರುವ ಕಾನೂನಿನ ಹೇಳಿಕೆಯು, ಸಂವಿಧಾನದ 141 ನೇ ಅನುಚ್ಛೇದದ ಅರ್ಥ ವ್ಯಾಪ್ತಿಯೊಳಗೆ ಸರ್ವೋಚ್ಚ ನ್ಯಾಯಾಲಯವು ನೀಡಿದ ಕಾನೂನಿನ ಒಂದು ಚ ಘೋಷಣೆಯಾಗಿದೆ; ಎರಡನೆಯದಾಗಿ, ಕಾನೂನಿನ ಘೋಷಣೆಯ ಹೊರತಾಗಿಯೂ, ಆದೇಶದಲ್ಲಿ ಏನನ್ನೇ ಹೇಳಲಾಗಿದ್ದರೂ, ಅದೆಲ್ಲವೂ ಸರ್ವೋಚ್ಚ ನ್ಯಾಯಾಲಯವು ದಾಖಲಿಸಿದ ನಿರ್ಣಯಗಳಾಗಿದ್ದು, ಅವು ಅದರಲ್ಲಿನ ಪಕ್ಷಕಾರರಿಗೆ ಹಾಗೂ ಸರ್ವೋಚ್ಚ ನ್ಯಾಯಾಲಯವು ದೇಶದ ಅತ್ಯುನ್ನತ ನ್ಯಾಯಾಲಯವಾಗಿರುವುದರಿಂದ ನ್ಯಾಯಿಕ ಕಾರ್ಯವಿಧಾನದ ಮಾರ್ಗದ ಮೂಲಕ ಅದಕ್ಕೆ ತರುವಾಯದ ಯಾವುದೇ ವ್ಯವಹರಣೆಯಲ್ಲಿ ನ್ಯಾಯಾಲಯ ನ್ಯಾಯಾಧಿಕರಣ ಅಥವಾ ಪ್ರಾಧಿಕಾರಗಳಿಗೂ ಸಹ ಬಂಧನಕಾರಿಯಾಗುತ್ತದೆ.ಆದರೆ, ಸರ್ವೋಚ್ಚ ನ್ಯಾಯಾಲಯವು ವಿಶೇಷ ಅನುಮತಿ ಅರ್ಜಿಯನ್ನು ತಳ್ಳಿಹಾಕಿದ ಆದೇಶದಲ್ಲಿ, ಅಧೀನ ನ್ಯಾಯಾಲಯದ ನ್ಯಾಯಾಧಿಕರಣದ ಅಥವಾ ಪ್ರಾಧಿಕಾರದ ಆದೇಶವು, ವಿಶೇಷ ಅನುಮತಿ ಅರ್ಜಿಯನ್ನು ತಳ್ಳಿ ಹಾಕಿ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿದ ಆದೇಶದಲ್ಲಿ ಚ ವಿಲೀನವಾಗಿದೆಯೆಂದು ಅಥವಾ ಆದೇಶವು, ತರುವಾಯದ ವ್ಯವಹರಣೆಗಳಲ್ಲಿ ಪೂರ್ವ ನ್ಯಾಯ ನಿರ್ಣಯದ ಹಾಗೆ ಬಂಧನಕಾರಿಯಾದ ಆದೇಶ ಮಾತ್ರವಾಗಿದೆ ಎಂದು ಇದರ ಅರ್ಥವಲ್ಲ.ಒಮ್ಮೆ ಅಪೀಲಿಗೆ ಅನುಮತಿ ನೀಡಲಾಗಿದೆ ಎಂದು ಮತ್ತು ಸರ್ವೋಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಅನ್ವಯಿಸಲಾಗಿದೆ ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರ್ಣಯ ಕೈಗೊಂಡರೆ ಅಪೀಲಿನಲ್ಲಿ ಹೊರಡಿಸಿದ ಆದೇಶಕ್ಕೆ

ವಿಲೀನ ಸಿದ್ಧಾಂತವು ಅನ್ವಯವಾಗುತ್ತದೆ, ಸದರಿ ಆದೇಶವು ವಿಪರ್ಯವಾಗಿರಬಹುದು, ಮಾರ್ಪಾಟುಗೊಳ್ಳಬಹುದು ಅಥವಾ ಕೇವಲ ದೃಢೀಕರಣವಾಗಿರಬಹುದು.

17. ಈ ಸಂದರ್ಭಗಳ ಹಿನ್ನೆಲೆಯಲ್ಲಿ ರಾಜಸ್ಥಾನ ಉಚ್ಚ ನ್ಯಾಯಾಲಯದ ಜೋದ್ಪುರ ಪೀಠ ಮತ್ತು ಮದ್ರಾಸ್ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠಗಳಿಂದ ಉದ್ಭವಿಸಿದ ವಿಶೇಷ ಅನುಮತಿ ಅರ್ಜಿಗಳ ವಜಾಗೊಳಿಸುವಿಕೆಯು, ವಿಶೇಷವಾಗಿ ಸಂವಿಧಾನದ 141 ನೇ ಅನುಚ್ಛೇದದ ಅರ್ಥವ್ಯಾಪ್ತಿಯಲ್ಲಿ, ನಿರ್ದಿಷ್ಟವಾಗಿ ಕಾನೂನಿನ ಪ್ರಶ್ನೆಯನ್ನು ಮೊಕದ್ದಮೆಯಲ್ಲಿನ ವಿವಾದಕ್ಕೆ ಸಂಬಂಧಿಸಿದಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯಕ್ಕೆ ಬಿಟ್ಟಾಗ ಅದು ದೇಶದ ಕಾನೂನಾಗುತ್ತದೆ ಚ ಎಂದು ಇಂಗಿತವಾಗುವುದಿಲ್ಲವೆಂದು ನಿರ್ಣಯಿಸಲಾಗಿದೆ.ಈ ಸಂದರ್ಭಗಳ ಹಿನ್ನೆಲೆಯಲ್ಲಿ ರಾಜಸ್ಥಾನ ಉಚ್ಚ ನ್ಯಾಯಾಲಯದ ಜೋದ್ಪುರ ಪೀಠ ಮತ್ತು ಮದ್ರಾಸ್ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠ ಇವುಗಳ ಆದೇಶದ ಸಂಬಂಧವಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ವಿಶೇಷ ಅನುಮತಿ ಚ ಅರ್ಜಿಯ ವಜಾಗೊಳಿಸುವಿಕೆಯ ದೃಷ್ಟಿಯಿಂದದಿನಾಂಕ: 2.8.2018 ರ ಕರ್ನಾಟಕ ಉಚ್ಚ ನ್ಯಾಯಾಲಯದ ಪ್ರಧಾನ ಪೀಠದ ವಿಭಾಗೀಯ ಪೀಠದ ಆದೇಶಕ್ಕೆ ಚ ಬದಲಾಗಿ, ಪ್ರಸ್ತುತ ಮೊಕದ್ದಮೆಯಲ್ಲಿ ಇದನ್ನು ಅನ್ವಯಿಸಬೇಕಿತ್ತು ಎಂದು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ವಾದಿಸಿರುವುದರಲ್ಲಿ ಯಾವುದೇ ಹುರುಳಿಲ್ಲ.

18. ರಾಜಸ್ಥಾನ ಉಚ್ಚ ನ್ಯಾಯಾಲಯದ ಜೋಧಪುರ ಪೀಠದ ಆದೇಶವನ್ನು ಚ ಮತ್ತು ಮದ್ರಾಸ್ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಆದೇಶವನ್ನು 0 ಚ ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಆ ಕಾರಣಕ್ಕಾಗಿಯೇ ಏಕೆ ಅನ್ವಯಿಸಲಾಗದು ಎಂಬುದಕ್ಕೆ ಮತ್ತೊಂದು ಕಾರಣವಿದೆ.ಆ ಆದೇಶಗಳಲ್ಲಿ ಮೇಲೆ ಉದ್ಧ್ವತಗೊಳಿಸಲಾಗಿರುವ ಪ್ರಸ್ತುತ ಮೊಕದ್ದಮೆಯಲ್ಲಿ ಇದ್ದಂತೆ ನಿಯಮಗಳ ಅನುಸೂಚಿಗೆ ಉಲ್ಲೇಖ ಮಾಡಲಾಗಿಲ್ಲ.ನಿಯಮಗಳಡಿಯಲ್ಲಿ ಅಂಚೆ ಸಹಾಯಕ ಅಥವಾ ವಿಂಗಡಣೆ ಸಹಾಯಕ ಹುದ್ದೆಯನ್ನು ಭರ್ತಿ ಮಾಡುವ ವಿಧಾನವನ್ನು ಸದರಿ ಪೀಠಗಳ ಗಮನಕ್ಕೆ ತರಲಾಗಿಲ್ಲ.ವಾಸ್ತವವಾಗಿ, ರಾಜಸ್ಥಾನ ಉಚ್ಚ ನ್ಯಾಯಾಲಯದ ಜೋಧಪುರ ಪೀಠದ ಆದೇಶದಲ್ಲಿ, ಅದರಲ್ಲಿರುವ ಅಪೀಲುದಾರನ ಪರ ವಕೀಲರಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಅಭಿಪ್ರಾಯವಿದೆ.ಅಂದರೆ, ಭಾರತ ಒಕ್ಕೂಟ ಮತ್ತು ಅಂಚೆ ಇಲಾಖೆ ಇವುಗಳಿಗೆ ಅಂಚೆ ಸಹಾಯಕ ಅಥವಾ ವಿಂಗಡಣೆ ಸಹಾಯಕ ಹುದ್ದೆಗಳ ಮುಂಬಡ್ತಿಗಾಗಿ ಕಲ್ಪಿಸಿರುವ ಉಪಬಂಧವನ್ನು ದಾಖಲೆಗೆ ತರುವಂತೆ ಮೇಲಿಂದ ಮೇಲೆ ಕೇಳಲಾಗಿದೆ.ನ್ಯಾಯಾಲಯದ ಅವಗಾಹನೆಗಾಗಿ ಅಂತಹ ಯಾವುದೇ ಉಪಬಂಧವನ್ನು ಮಂಡಿಸಿಲ್ಲ ಎಂದು ಅಭಿಪ್ರಾಯಪಡಲಾಗಿದೆ.ಈ ಸಂದರ್ಭಗಳ ಹಿನ್ನೆಲೆಯಲ್ಲಿ ಇಲಾಖಾ ಪರೀಕ್ಷೆಗೆ ಎಂದರೆ ಪರಿಮಿತ ಸ್ಪರ್ಧಾತ್ಮಕ ಪರೀಕ್ಷೆಗೆ ಅನುಸಾರವಾಗಿ ಮಾಡಿದ ನೇಮಕಾತಿಯ ' ನೇರ ನೇಮಕಾತಿ ' ಅಲ್ಲದೆ ಬೇರೇನೂ ಅಲ್ಲವೆಂದು ನಿರ್ಧಾರಕ್ಕೆ ಬರಲಾಯಿತು.ಎಂದರೆ ಮಾಡಲಾದ ನೇಮಕಾತಿಯು ನೇರ ನೇಮಕಾತಿಯ ಸ್ವರೂಪದ್ದೇ ಹೊರತು, ನಿಯಮಗಳಿಗೆ ವಿರುದ್ಧವಾದುದೆಂದು ನಿರ್ಧರಿಸಿದ ಮುಂಬಡ್ತಿಯಲ್ಲಿ ಈ ಸಂದರ್ಭಗಳ ಹಿನ್ನೆಲೆಯಲ್ಲಿ, ಸದರಿ ನೇಮಕಾತಿಯನ್ನು ನೇರ ನೇಮಕಾತಿ ಸ್ವರೂಪದ್ದೇ ಹೊರತು ಮುಂಬಡ್ತಿಯಲ್ಲ ಎಂದು ಅರ್ಥೈಸುವ ಮೂಲಕ ಭಾರತ ಒಕ್ಕೂಟಕ್ಕೆ ಹಾಗೂ ಅಂಚೆ ಇಲಾಖೆಗೆ ಅದರಲ್ಲಿರುವ ಪ್ರತ್ಯರ್ಜಿದಾರರಿಗೆ ಎಂ.ಎ.ಸಿ.ಪಿ.-III ರ ಅಡಿಯಲ್ಲಿನ ಪ್ರಯೋಜನಗಳನ್ನು ನೀಡಲು ನಿರ್ದೇಶಿಸಲಾಯಿತು.ಅದರಂತೆ, ಮದ್ರಾಸ್ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪಿನಲ್ಲಿ, ನಿಯಮಗಳಿಗೆ ಹಾಗೂ ನಿಯಮಗಳಡಿಯಲ್ಲಿನ ಅನುಸೂಚಿಗೆ ಸಂಬಂಧಿಸಿದಂತೆ ಯಾವುದೇ ಉಲ್ಲೇಖವಿಲ್ಲ.ಇಂತಹ ಸಂದರ್ಭದಲ್ಲಿ, ಸದರಿ ತೀರ್ಪಿನ 9 ನೇಯ ಕಂಡಿಕೆಯಲ್ಲಿ ಅಂಚೆ ಸಹಾಯಕನಾಗಿ ಅಲ್ಲಿರುವ ಪ್ರತ್ಯರ್ಜಿದಾರನ ನೇಮಕವು ಮುಂಬಡ್ತಿಯ ರೀತಿಯಲ್ಲಿ ಆಗಿಲ್ಲವೆಂದು ಮತ್ತು ಹಾಗಾಗಿ ಇದೇ ರೀತಿಯ ನಿರ್ದೇಶನಗಳನ್ನು ಉದ್ಯೋಗಿಗಳ ಪರವಾಗಿ ನೀಡಲಾಯಿತು ಎಂದು ಅರ್ಥೈಸಲಾಗಿದೆ.ಆದರೆ, ಪ್ರಸ್ತುತ ಮೊಕದ್ದಮೆಯಲ್ಲಿ, ನೇಮಕಾತಿಯ ಸ್ವರೂಪವನ್ನು ಸ್ಪಷ್ಟವಾಗಿ ನಿಯಮಿಸಿರುವ ನಿಯಮಗಳ ಅನುಸೂಚಿಯ ಕಡೆಗೆ ನಮ್ಮ ಗಮನವನ್ನು ಸೆಳೆಯಲಾಗಿದೆ.ಒಪ್ಪಿಕೊಂಡಂತೆ, ಪ್ರಸ್ತುತ ಮೊಕದ್ದಮೆಯಲ್ಲಿ, ಪ್ರತ್ಯರ್ಜಿದಾರಳು ಇಲಾಖೆಯಲ್ಲಿ ಅಂಚೆಪೇದೆಯಾಗಿ ಈಗಾಗಲೇ ಕಾರ್ಯ ನಿರ್ವಹಿಸುತ್ತಿದ್ದಾಗಲೇ, ಇಲಾಖಾ ಪರೀಕ್ಷೆಯಲ್ಲಿ ಅರ್ಹಳಾಗಿದ್ದರ ಆಧಾರದ ಮೇಲೆ ಆಕೆಯನ್ನು ಅಂಚೆ ಸಹಾಯಕಳ ಹುದ್ದೆಗೆ ನೇಮಕ ಮಾಡಲಾಗಿತ್ತು.ಆದುದರಿಂದ, ಇದು ಸ್ಪಷ್ಟವಾಗಿ, ಬಡ್ತಿಯ ಪ್ರಕರಣವಾಗಿದೆ.

19. ಒ.ಎ.ಸಂಖ್ಯೆ:1259/2014 ರಲ್ಲಿನ ನ್ಯಾಯಾಧಿಕರಣದ ಮುಂಚಿನ ಆದೇಶದ ಕಡೆಗೆ ಕೂಡಾ ನಮ್ಮ ಗಮನವನ್ನು ಸೆಳೆಯಲಾಗಿದ್ದು, ಅದರಲ್ಲಿ, ಗೊತ್ತಾದ ಶೇಕಡಾವಾರು ಹುದ್ದೆಗಳನ್ನು ಇಲಾಖಾ

ಅಭ್ಯರ್ಥಿಗಳಿಗಾಗಿ ಪ್ರತ್ಯೇಕವಾಗಿ ಮೀಸಲಿರಿಸಲಾದಾಗ, ನೇರ ನೇಮಕಾತಿಗೆ ಮೀಸಲಿರಿಸಿದ ಶೇಕಡಾವಾರು ಪ್ರಮಾಣದಷ್ಟರ ಮಟ್ಟಿಗೆ ಮುಕ್ತ ಅವಕಾಶದಿಂದ ನೌಕರಿಭರ್ತಿಗೆ ವಿರುದ್ಧವಾಗಿ ಇದು ಮುಂಬಡ್ತಿಯ ಪ್ರಕರಣವೆಂದು ಇಂಗಿತವಾಗುತ್ತದೆ ಎಂದು ನಿರ್ಣಯಿಸಲಾಗಿದೆ.ಎಂ.ಎ.ಸಿ.ಪಿ.-III ರ ಅಡಿಯಲ್ಲಿನ ಪ್ರಯೋಜನಗಳಿಗೆ ಅರ್ಜಿದಾರನು ಅರ್ಹನಾಗಿರುವನೆ ಎಂಬುದನ್ನು ಪರಿಗಣಿಸಿದ ನಂತರ, ಶ್ರೀ ಕೃಷ್ಣಯ್ಯರವರು ಸಲ್ಲಿಸಿದ ಸದರಿ ಮೂಲ ಅರ್ಜಿಯಲ್ಲಿ, ಬನ್ವರ್ಲಾಲ್ ರೇಗರ್ ಮೊಕದ್ದಮೆಯಲ್ಲಿ, ರಾಜಸ್ಥಾನ ಉಚ್ಚ ನ್ಯಾಯಾಲಯದ ಜೋಧಪುರ ಪೀಠದ ತೀರ್ಪನ್ನು ಪರಿಗಣಿಸಿದ ಮೇಲೆ, ನ್ಯಾಯಾಧಿಕರಣವು, ಅನುಸೂಚಿಗೆ ಸಂಬಂಧಿಸಿದ ಸುಸಂಗತ ನಿಯಮಗಳನ್ನು ರಾಜಸ್ಥಾನ ಉಚ್ಚ ನ್ಯಾಯಾಲಯದ ಜೋಧಪುರ ಪೀಠದ ಗಮನಕ್ಕೆ ತರಲಾಗಿಲ್ಲ, ಅನ್ಯಥಾ ತಂದಿದ್ದರೆ, ಅದರ ತೀರ್ಪು ಬೇರೆಯದಾಗಿರುತ್ತಿತ್ತು ಎಂದು ನಿರ್ಣಯಿಸಿದೆ.

20. ಈ ಸಂದರ್ಭಗಳಲ್ಲಿ, ಪ್ರಸ್ತುತ ಮೊಕದ್ದಮೆಯಲ್ಲಿ, ಶ್ರೀ ಎಂ.ಜಿ. ಶಿವಅಂಗಪ್ಪರವರ ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಸಮನ್ವಯ ಪೀಠದ ಆದೇಶವನ್ನು ಅನುಸರಿಸಬೇಕು ಮತ್ತು ಇದರಲ್ಲಿರುವ ಪ್ರತ್ಯರ್ಜಿದಾರರು ಎಂ.ಎ.ಸಿ. ಪಿ.-III ರ ಯೋಜನೆ ಅಡಿಯಲ್ಲಿನ ಪ್ರಯೋಜನಗಳಿಗೆ ಹಕ್ಕುಳ್ಳವರಾಗಿಲ್ಲವೆಂದು ನಿರ್ಣಯಿಸಬೇಕು ಎಂಬುದನ್ನು ನಾವು ಮನಗಂಡಿದ್ದೇವೆ.

21. ಈ ಮೊದಲು ಹೇಳಿದ ಕಾರಣಗಳಿಂದಾಗಿ, ಬಸಣ್ಣ ನಾಯಕ್ ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಕಲಬುರ್ಗಿ ಪೀಠದ ಸಮನ್ವಯ ಪೀಠವು ಹೊರಡಿಸಿದ ಆದೇಶವನ್ನು ರಾಜಸ್ಥಾನ ಉಚ್ಚ ನ್ಯಾಯಾಲಯದ ಜೋಧಪುರ ಚ ಪೀಠದ ಆದೇಶವನ್ನು ಹಾಗೂದಿನಾಂಕ: 5.8.2014 (DD_1_DD) ರಂದು ವಿಲೆ ಮಾಡಲಾದ ಭಾರತ ಒಕ್ಕೂಟ ಮತ್ತು ಇತರರು -ವಿರುದ್ಧ —-ಶಕೀಲ್ ಅಹಮ್ಮದ್ ಬರಿ - ರಿಟ್ ಅರ್ಜಿಸಂಖ್ಯೆ: (ಸಿ) 4131/2014 ಮೊಕದ್ದಮೆಯ ದೆಹಲಿ ಉಚ್ಚ ನ್ಯಾಯಾಲಯವು ಹೊರಡಿಸಿದ ಆದೇಶ ಅನುಸರಿಸಿ ಹೊರಡಿಸಿರುವುದರಿಂದ, ಸದರಿ ಆದೇಶವನ್ನು ಅನುಸರಿಸುವುದನ್ನು ನಾವು ಸಹ ಒಪ್ಪುವುದಿಲ್ಲ.ವಾಸ್ತವವಾಗಿ, ಕೃಷ್ಣಯ್ಯ ಮೊಕದ್ದಮೆಯಲ್ಲಿ ರಿಟ್ ಅರ್ಜಿಸಂಖ್ಯೆ: (ಸಿ) 4131/2014,ದಿನಾಂಕ: 05.08.2014 ರಲ್ಲಿ, ದೆಹಲಿ ಉಚ್ಚ ನ್ಯಾಯಾಲಯವು ಚ ಹೊರಡಿಸಿದ ಆದೇಶ ಹಾಗೂ ಕೃಷ್ಣಯ್ಯ ಮೊಕದ್ದಮೆಯಲ್ಲಿ ಉಲ್ಲೇಖಿಸಿರುವ ಸಂಬಂಧದಲ್ಲಿ ದೆಹಲಿ ಉಚ್ಚ ನ್ಯಾಯಾಲಯವು ರಿಟ್ ಅರ್ಜಿಸಂಖ್ಯೆ: 441/2014 ರಲ್ಲಿ ಹೊರಡಿಸಿದ ಆದೇಶವನ್ನು ಉಲ್ಲೇಖಿಸಿ, ಸದರಿ ಆದೇಶಗಳನ್ನು, ನೇಮಕಾತಿ ನಿಯಮಗಳನ್ನು ಉಲ್ಲೇಖಿಸದೆ ಮತ್ತು ಡಿ.ಬಿ. ಸಿವಿಲ್ ರಿಟ್ ಅರ್ಜಿಸಂಖ್ಯೆ: 11366/2012 ರಲ್ಲಿ ರಾಜಸ್ಥಾನ ಉಚ್ಚ ನ್ಯಾಯಾಲಯದ ಜೋಧಪುರ ಪೀಠದ ಆದೇಶವನ್ನು ಅವಲಂಬಿಸಿ, ನಿರ್ಣಯಿಸಲಾಗಿದೆ.ರಾಜಸ್ಥಾನ ಉಚ್ಚ ನ್ಯಾಯಾಲಯದ ಚ ಜೋಧಪುರ ಪೀಠ ಮತ್ತು ಮದ್ರಾಸ್ ಉಚ್ಚ ನ್ಯಾಯಾಲಯದ ವಿಭಾಗೀಯ ಚ ಪೀಠ ಇವು ಹೊರಡಿಸಿದ ಆದೇಶಗಳಿಂದ ಉದ್ಭವಿಸಿದ ವಿಶೇಷ ಅನುಮತಿ ಅರ್ಜಿಯನ್ನು ವಜಾಗೊಳಿಸಿದ ಪ್ರಸ್ತುತ ಮೊಕದ್ದಮೆಗೆ ಅವುಗಳನ್ನು ಏಕೆ ಅನ್ವಯಿಸಲಾಗದು ಎಂಬುದಕ್ಕೆ ನಾವು ಕಾರಣಗಳನ್ನು ನೀಡಿದ್ದೇವೆ.ಮದ್ರಾಸ್ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಆದೇಶದಿಂದ ಉದ್ಭವಿಸಿದ ವಿಶೇಷ ಚ ಅನುಮತಿ ಅರ್ಜಿಯನ್ನು ವಜಾಗೊಳಿಸುವಾಗ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕಾನೂನಿನ ಪ್ರಶ್ನೆಯನ್ನು ಮುಕ್ತವಾಗಿರಿಸಿತು.

22. ತದನುಸಾರವಾಗಿ, ರಿಟ್ ಅರ್ಜಿಗೆ ಅನುಮತಿ ನೀಡಲಾಗಿದೆ.ಒ.ಎ.ಸಂಖ್ಯೆ:170/00898/2016 ರಲ್ಲಿ ಹೊರಡಿಸಲಾಗಿದ್ದದಿನಾಂಕ: 22.11.2017 ರ ಪ್ರಶ್ನಿತ ಆದೇಶವನ್ನು ರದ್ದುಗೊಳಿಸಲಾಗಿದೆ.

ಪಕ್ಷಕಾರರು ಅವರಿಗೆ ಸಂಬಂಧಿಸಿದ ವೆಚ್ಚಗಳನ್ನು ಅವರೇ ಭರಿಸತಕ್ಕದ್ದು.